**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 231/2022

**ಸಾಕ್ಷಿಯನ್ನು ದಿನಾಂಕ** 31.12.2025 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರತಾಪ್ ಕೆ ಎಸ್ | ಪಿ.ಡಬ್ಲ್ಯೂ-21 |
| ತಂದೆಯ/ಗಂಡನ ಹೆಸರು | : | ಶಿವಣ್ಣೇಗೌಡ | ಸಿ.ಡಬ್ಲ್ಯೂ-39 |
| ವಯಸ್ಸು | : | 35 | |
| ಉದ್ಯೋಗ | : | ಪೋಲಿಸ್ ಕಾನ್ಸಟೇಬಲ್, ಮೇಟಗಳ್ಳಿ ಪಿ.ಎಸ್ | |
| ವಾಸ ಸ್ಥಳ | : | ಮೈಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2017 ಮೇ ನಿಂದ 2024 ಜೂನ್ ವರೆಗೆ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪೋಲಿಸ್ ಕಾನ್ಸಟೇಬಲ್ ಆಗಿ ಕೆಲಸ ಮಾಡಿರುತ್ತೇನೆ. ದಿನಾಂಕ 4.10.2021 ರಂದು ಕ್ರೈಂ ನಂ.59/2021 ರಲ್ಲಿನ ಎಫ್.ಐ.ಆರ್ ಮತ್ತು ದೂರನ್ನು ರಾತ್ರಿ 9.45 ಕ್ಕೆ ಠಾಣೆಯಿಂದ ಪಡೆದುಕೊಂಡು ಅದೇ ದಿನ ರಾತ್ರಿ 10.15 ಕ್ಕೆ ನ್ಯಾಯಾಧೀಶರಿಗೆ ತಲುಪಿಸಿರುತ್ತೇನೆ. ಈಗ ನಾನು ನೋಡುತ್ತಿರುವ ಎಫ್.ಐ.ಆರ್ ಮತ್ತು ನಿಪಿ10 ಎಂದು ಗುರುತಿಸಿರುವ ದೂರು ಅವೇ ಇರುತ್ತವೆ. ಸದರಿ ಎಫ್.ಐ.ಆರ್ ಅನ್ನು ನಿಪಿ30 ಎಂದು ಗುರುತಿಸಿದೆ. ಆ ಕಾಲಕ್ಕೆ ನಾನು ನ್ಯಾಯಾಲಯದ ಕರ್ತವ್ಯಕ್ಕೆ ನಿಯೋಜಿತಗೊಂಡಿದ್ದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ**

ನಾನು ಮೇಲಾಧಿಕಾರಿಗಳ ಆದೇಶ ಪಾಲಿಸುತ್ತೇನೆ ಎಂದರೆ ನಿಜ. ರಾತ್ರಿ 9.45ಕ್ಕೆ ನಾನು ಎಫ್.ಐ.ಆರ್ ಪಡೆದುಕೊಂಡಿರುತ್ತೇನೆ. ಆ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡುತ್ತಾರೆ. ಆರೋಪಿತರು ತಪ್ಪು ಮಾಡದಿದ್ದರೂ ಮೇಲಾಧಿಕಾರಿಗಳ ಆದೇಶದಂತೆ ಸುಳ್ಳು ಎಫ್.ಐ.ಆರ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು